# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್**

ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

**ಭಾಗ ೯**

## ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣ *(ಮುಂದುವರಿದ ಭಾಗ)*

ಚಿಕಾಗೋ ಧರ್ಮಸಮ್ಮೇಳನದಲ್ಲಿ ಪ್ರತಿದಿನ ಮೂರು ಸಮಾವೇಶಗಳು ಇರುತ್ತಿದ್ದವು. ಒಂದೊಂದು ಸಮಾವೇಶವೂ ಎರಡು ಅಥವಾ ಎರಡೂವರೆ ಗಂಟೆಗಳ ಕಾಲ ನಡೆಯುತ್ತಿತ್ತು. ಪ್ರತಿಯೊಂದು ಸಮಾವೇಶಕ್ಕೂ ಒಬ್ಬರು ಸಭಾಪತಿಗಳು ಇರುತ್ತಿದ್ದರು. ಅವರು ಸಮಾವೇಶ ಆರಂಭಗೊಳ್ಳುವಾಗ ಪ್ರಾರ್ಥನೆಯನ್ನು ಮಾಡುತ್ತಿದ್ದರು. ಸಭಿಕರೆಲ್ಲರೂ ಆ ಸಮಯದಲ್ಲಿ ಮೌನವಾಗಿ ಎದ್ದುನಿಲ್ಲುತ್ತಿದ್ದರು. ಒಬ್ಬೊಬ್ಬ ಭಾಷಣಕಾರರೂ ಅರ್ಧಗಂಟೆಗಳ ಕಾಲ ಪ್ರವಚನವನ್ನು ಮಾಡುತ್ತಿದ್ದರು. ಸಭಿಕರಿಗೆ ಮೆಚ್ಚುಗೆಯಾಗಿರುವ ಭಾಷಣಕಾರರು ಕೆಲವರು ಇರುತ್ತಿದ್ದರು. ಅವರಲ್ಲೆಲ್ಲ ಅತ್ಯಂತ ಪ್ರಸಿದ್ಧರಾಗಿದ್ದವರೆಂದರೆ ಸ್ವಾಮಿ ವಿವೇಕಾನಂದರು. ಸಭಿಕರು ಅವರ ವ್ಯಕ್ತಿತ್ವದೆಡೆಗೆ ಆಕರ್ಷಿತರಾಗಿದ್ದರು. ಇದರಿಂದ ಕ್ರೈಸ್ತಧರ್ಮದ ಕೆಲವು ಭಾಷಣಕಾರರಿಗೆ ಇರಿಸುಮುರಿಸಾಗುತ್ತಿತ್ತು.

ಬೋಸ್ಟನ್ ಈವನಿಂಗ್ ಟ್ರಾನ್ಸ್‌ಸ್ಕ್ರಿಪ್ಟ್ ಎಂಬ ಪತ್ರಿಕೆಯು ಹೀಗೆ ಬರೆಯಿತು: ''ಕೊಲಂಬಸ್ ಸಭಾಂಗಣದಲ್ಲಿ ನಾಲ್ಕು ಸಾವಿರ ಸಭಿಕರು ಗಂಟೆಗಟ್ಟಲೆ ಇತರ ಭಾಷಣಕಾರರ ಭಾಷಣಗಳನ್ನು ಹಸನ್ಮುಖರಾಗಿ ಕೇಳುತ್ತ , ಕಾಯುತ್ತ ಇರುತ್ತಿದ್ದರು. ಏಕೆ ಗೊತ್ತೆ? ಈ ಎಲ್ಲ ಭಾಷಣಗಳನ್ನು ಕೇಳಿಯಾದ ಮೇಲೆ ಹದಿನೈದು ನಿಮಿಷಗಳಾದರೂ ಇರುವ ಸ್ವಾಮಿ ವಿವೇಕಾನಂದರ ಒಂದು ಪುಟ್ಟ ಭಾಷಣವನ್ನು ಕೇಳಲು.'' ತಮ್ಮ ಒಂದು ಪತ್ರದಲ್ಲಿ ಸ್ವಾಮೀಜಿಯೇ ಇದನ್ನು ಉಲ್ಲೇಖಿಸುತ್ತಾರೆ. ಹಾಗೂ ಆಯೋಜಕರು ಮಾಡುತ್ತಿದ್ದ ಒಂದು ಉಪಾಯದ ಬಗ್ಗೆಯೂ ಹೇಳುತ್ತಾರೆ. ಅದೆಂದರೆ ಸ್ವಾಮಿ ವಿವೇಕಾನಂದರನ್ನು ಕಡೆಯ ಭಾಷಣಕಾರರಾಗಿ ಘೋಷಿಸುವುದು; ಆ ಮೂಲಕ ಸಭಿಕರನ್ನು ಹಿಡಿದಿಟ್ಟುಕೊಳ್ಳುವುದು.

ವೀರಚಂದ್ ಗಾಂಧಿ ಎನ್ನುವವರು ಸರ್ವಧರ್ಮ ಸಮ್ಮೇಳನದ ಪ್ರತಿನಿಧಿಯಾಗಿದ್ದರು. ಅವರು ಜೈನಧರ್ಮವನ್ನು ಪ್ರತಿನಿಧಿಸುತ್ತಿದ್ದರು. ಅವರು 'ಎರೆನಾ' ಎನ್ನುವ ಪತ್ರಿಕೆಯ ಜನವರಿ ೧೮೯೫ರ ಸಂಚಿಕೆಯಲ್ಲಿ ಹೀಗೆ ಬರೆಯುತ್ತಾರೆ: ''ಸರ್ವಧರ್ಮ ಸಮ್ಮೇಳನದಲ್ಲಿ ಭಾರತದಿಂದ ಬಂದಿದ್ದ ಮಹಾನ್ ಭಾಷಣಕಾರನು ತನ್ನ ಭಾಷಣವನ್ನು ಮುಗಿಸಿದೊಡನೆಯೇ ಮೂರನೆಯ ಒಂದು ಭಾಗದಷ್ಟು, ಇಲ್ಲವೇ ಕೆಲವೊಮ್ಮೆ ಮೂರನೆಯ ಎರಡು ಭಾಗ



ದಷ್ಟು ಸಭಿಕರು ಪ್ರವೇಶಮಾರ್ಗಗಳತ್ತ ಧಾವಿಸುತ್ತಿದ್ದುದನ್ನು ನೋಡಬಹುದಿತ್ತು. ಅವರು ಕಡೆಯಲ್ಲಿ ಕೆಲವು ನಿಮಿಷಗಳ ಕಾಲ ಭಾಷಣ ಮಾಡುತ್ತಾರೆ ಎನ್ನುವ ಘೋಷಣೆಯನ್ನು ನಂಬಿಕೊಂಡು, ನೂರಾರು ಸಭಿಕರು ಬೇಸರ ಬರಿಸುವ ಉಪನ್ಯಾಸಗಳನ್ನು ಗಂಟೆಗಟ್ಟಲೆ ಕೇಳುತ್ತಿದ್ದರು; ಇವುಗಳಲ್ಲಿ ತಮಗೆ ಆಸಕ್ತಿ ಇಲ್ಲ ಎನ್ನುವುದನ್ನು ನೇರವಾಗಿಯೇ ವ್ಯಕ್ತಪಡಿಸುತ್ತಿದ್ದರು. ಆದರೂ ಕಡೆ ಯಲ್ಲಿ ಸ್ವಾಮಿ ವಿವೇಕಾನಂದರು ಭಾಷಣ ಮಾಡಬಹುದು ಎಂಬ ನಿರೀಕ್ಷೆಯಿಂದ ಗಂಟೆಗಟ್ಟಲೆ ಕಾಯುವುದಕ್ಕೂ ಸಿದ್ಧರಾಗಿದ್ದರು.''

ನಾರ್ತಾಂಪ್ಟನ್ ಡೈಲಿ ಹೆರಾಲ್ಡ್ ಎಂಬ ಪತ್ರಿಕೆಯು ಏಪ್ರಿಲ್ ೧೧, ೧೮೯೪ರ ಸಂಚಿಕೆಯಲ್ಲಿ ಹೀಗೆ ವರದಿಮಾಡಿತು:

''ಸರ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರನ್ನು ಕಡೆಯವರೆಗೂ ಭಾಷಣ ಮಾಡಲು ಸಂಘಟಕರು ಬಿಡು

ತ್ತಿರಲಿಲ್ಲ. ಸಭಿಕರು ಕಡೆಯವರೆಗೂ ಕುಳಿತುಕೊಳ್ಳಲಿ ಎಂಬುದೇ ಇದರ ಉದ್ದೇಶವಾಗಿತ್ತು.. ಸಾವಿರಾರು ಜನರು ಈ ಮಹಾನ್ ವ್ಯಕ್ತಿಯ ಭಾಷಣವನ್ನು ಹದಿನೈದು ನಿಮಿಷಗಳ ಕಾಲ ಕೇಳಲು, ಗಂಟೆಗಟ್ಟಲೆ ಕಾಲ ತಾಳ್ಮೆಯಿಂದ ಕುಳಿತುಕೊಳ್ಳುತ್ತಿದ್ದರು.''

ಮೂರನೆಯ ದಿವಸ ಸಂಜೆ ಒಂದು ಸಮಾವೇಶ ಆಯೋಜಿತವಾಗಿತ್ತು. ಅದರಲ್ಲಿ ಮೂರು ಜನ ಸಾಂಪ್ರದಾಯಿಕ ಕ್ರೈಸ್ತ ಪಾದ್ರಿಗಳು ತಮ್ಮ ಪ್ರಬಂಧಗಳನ್ನು ಮಂಡಿಸುವವರಿದ್ದರು. ಕಡೆಯಲ್ಲಿ ಸ್ವಾಮಿ ವಿವೇಕಾನಂದರು ಭಾಷಣ ಮಾಡುವರೆಂದು ಘೋಷಣೆ ಮಾಡಿದ್ದರಿಂದಲೇ, ಈ ಸಮಾವೇಶ ನಡೆಸಲು ಸಾಧ್ಯವಾಯಿತು. ಐದನೆಯ ದಿನದಂದು, ಮಧ್ಯಾಹ್ನದ ದೀರ್ಘ ಸಮಾವೇಶದಲ್ಲಿ, ಮೂರು ಪ್ರಬಂಧಗಳನ್ನು ಮಂಡಿಸಲಾಯಿತು. ತದನಂತರ ಸ್ವಾಮಿ ವಿವೇಕಾನಂದರು ಭಾಷಣಮಾಡಲು ಮೇಲೆದ್ದರು. ಒಬ್ಬ ಪ್ರತ್ಯಕ್ಷದರ್ಶಿ ಹೀಗೆ ಬರೆದಿದ್ದಾರೆ: ''ಸ್ವಾಮಿ ವಿವೇಕಾನಂದರು ಒಬ್ಬ ರಾಜಕುಮಾರನಂತೆ ತಮ್ಮ ಚಿನ್ನದ ಬಣ್ಣದ ರುಮಾಲಿನಲ್ಲಿ ಭವ್ಯವಾಗಿ ಕಾಣುತ್ತಿದ್ದರು. ಕಿತ್ತಳೆ ಬಣ್ಣದ ಉಡುಪಿನಲ್ಲಿ ಇರುವ ಸಭ್ಯ ಜನರ ರಾಜಕುಮಾರನೆಂದೇ ಅವರು ಪ್ರಸಿದ್ಧರಾಗಿದ್ದರು. ಅವರನ್ನು ಭಾಷಣ ಮಾಡಲು ಕರೆಯಲಾಯಿತು. ಆಗ ಸಭಿಕರೆಲ್ಲರೂ ಭಾರೀ ಚಪ್ಪಾಳೆಯ ಮೂಲಕ ಮತ್ತು ಹಾರ್ದಿಕವಾದ ಹರ್ಷೋದ್ಗಾರದ ಮೂಲಕ ಸ್ವಾಮೀಜಿಯವರನ್ನು ಸ್ವಾಗತಿಸಿದರು. ಸ್ವಾಮಿ ವಿವೇಕಾನಂದರು ಅಂದು ಒಂದು ಕಥೆಯನ್ನು ಹೇಳಿದರು. ಅದೇ, ಬಾವಿಯಲ್ಲಿ ಹುಟ್ಟಿ ಬೆಳೆದ ಕಪ್ಪೆಯ ಕಥೆ. ಕಡೆಯಲ್ಲಿ ಅವರು ಹೇಳಿದರು: 'ನಾನು ಹಿಂದೂ, ನನ್ನದೇ ಆದ ಒಂದು ಸಣ್ಣ ಬಾವಿಯಲ್ಲಿ ಕುಳಿತುಕೊಂಡಿದ್ದೇನೆ. ಈ ಬಾವಿಯೇ ನನ್ನ ಇಡೀ ಜಗತ್ತು ಎಂದು ಭಾವಿಸುತ್ತೇನೆ. ಕ್ರೈಸ್ತನೊಬ್ಬನು ತನ್ನ ಸಣ್ಣ ಬಾವಿಯಲ್ಲಿ ಕುಳಿತುಕೊಂಡು, ತನ್ನ ಬಾವಿಯೇ ಇಡೀ ಜಗತ್ತು ಎಂದು ಭಾವಿಸುತ್ತಾನೆ. ಹಾಗೆಯೇ ಒಬ್ಬ ಮುಸಲ್ಮಾನನು ತನ್ನದೊಂದು ಚಿಕ್ಕ ಬಾವಿಯಲ್ಲಿ ಕುಳಿತು, ಇದೇ ಎಲ್ಲ ಜಗತ್ತು ಎಂದು ಭಾವಿಸುತ್ತಾನೆ.' ''

ಸರ್ವಧರ್ಮ ಸಮ್ಮೇಳನವು ವಿವಾದಗಳಿಗೆ ಎಡೆ ಮಾಡಿಕೊಡಬಾರದು ಎನ್ನುವುದೇ ಸಂಘಟಕರ ಉದ್ದೇಶವಾಗಿತ್ತು. ವಿವಿಧ ಧರ್ಮಗಳ ಸಿದ್ಧಾಂತಗಳ ಒಂದು ವಿಚಾರಗೋಷ್ಠಿಯ ರೀತಿಯಲ್ಲಿ ಇದು ಇರಬೇಕು ಎಂಬುದೇ ಅವರ ಗುರಿಯಾಗಿತ್ತು. ಈ ಸಮ್ಮೇಳನದಲ್ಲಿ ಪ್ರಸ್ತುತಪಡಿಸಲಾದ ವಿಷಯಗಳಲ್ಲಿ ಎರಡು ವಿಭಾಗಗಳು ಇದ್ದವು. ಮೊದಲ ವಿಭಾಗವೆಂದರೆ ತಾತ್ತ್ವಿಕ ವಿಚಾರಗಳು, ಭಗವತ್ ತತ್ತ್ವ, ಮಾನವನ ಸ್ವರೂಪ, ಧರ್ಮದ ಮಹತ್ವ, ಧಾರ್ಮಿಕ ಸಾಕ್ಷಾತ್ಕಾರ, ದಿವ್ಯ ಅವತಾರಗಳು, ಅಮೃತತ್ತ್ವ ಮುಂತಾದವು. ಇಂಥ ವಿಚಾರಗಳನ್ನು ಎರಡನೆಯ ದಿನದಿಂದ ಹತ್ತನೆಯ ದಿನದವರೆಗೆ ಚರ್ಚಿಸಲಾಯಿತು. ತದನಂತರ, ಹಲವಾರು ಧರ್ಮಗಳಲ್ಲಿ ಕಂಡುಬರುವ ಇಂದ್ರಿಯಾತೀತ ಸಂಗತಿಗಳನ್ನು ವಿಚಾರ ಮಾಡಲಾಯಿತು. ಬಳಿಕ ಉಳಿದ ಏಳು ದಿನಗಳಲ್ಲಿ ಧರ್ಮಕ್ಕೆ ಸಂಬಂಧಪಟ್ಟ ಹಲವಾರು ಸಂಗತಿಗಳ ಬಗ್ಗೆ ದೀರ್ಘವಾಗಿ ವಿಚಾರ ಮಂಥನ ನಡೆಯಿತು. ಅವುಗಳಲ್ಲಿ ಧರ್ಮ ಮತ್ತು ಸಾಮಾಜಿಕ ಸಮಸ್ಯೆಗಳೂ ಸೇರಿದ್ದವು. ಇದಲ್ಲದೆ, ಕೌಟುಂಬಿಕ ಜೀವನ, ಕಲೆ ಮತ್ತು ವಿಜ್ಞಾನ, ಮಾನವತೆಯ ಪ್ರೇಮ, ನೈತಿಕತೆ, ಕ್ರೈಸ್ತ ಮಿಷನರಿ ವಿಧಾನಗಳು ಮುಂತಾದ ಹತ್ತುಹಲವು ವಿಚಾರಗಳು ಕೂಡ ಇದ್ದವು.

ಸರ್ವಧರ್ಮ ಸಮ್ಮೇಳನದ ಮೊದಲ ಹತ್ತು ದಿನಗಳಲ್ಲಿ, ಒಂದೊಂದು ಧರ್ಮಕ್ಕೆ ಒಂದೊಂದು ದಿನವನ್ನು ಮೀಸಲಿಡಲಾಗಿತ್ತು. ಮಣಿಲಾಲ ಎನ್. ದ್ವಿವೇದಿ ಎನ್ನುವವರು ಹಿಂದೂ ಧರ್ಮ ಮತ್ತು ಭಾರತೀಯ ತತ್ತ್ವಶಾಸ್ತ್ರದ ಬಗ್ಗೆ ತಾಂತ್ರಿಕ ಪ್ರಬಂಧವೊಂದನ್ನು ಮಂಡಿಸಿದರು. ಕೊಲ್ಕತಾದ ಮಹಾಬೋಧಿ ಸೊಸೈಟಿಯ ಧರ್ಮಪಾಲರು ಬೌದ್ಧಧರ್ಮದ ಹಲವಾರು ಆಯಾಮಗಳನ್ನು ವಿವರಿಸಿದರು. ಹಾಗೆಯೇ, ಕನ್ಫ್ಯೂಷಿಯನ್ ಧರ್ಮ, ಶಿಂಟೋ ಧರ್ಮ, ಜಪಾನೀ ಬೌದ್ಧ ಧರ್ಮ, ಮುಸ್ಲಿಂ ಧರ್ಮ, ಯಹೂದಿ ಧರ್ಮ ಮುಂತಾದ ಹಲವಾರು ಧಾರ್ಮಿಕ ಪಂಗಡಗಳ ತತ್ತ್ವಗಳನ್ನು ಪ್ರತಿಪಾದಿಸಲಾಯಿತು ಮತ್ತು ವಿಚಾರ ಮಾಡಲಾಯಿತು. ಸ್ವಾಮಿ ವಿವೇಕಾನಂದರು ಈ ಹಲವಾರು ಸಮಾವೇಶಗಳಲ್ಲಿ ಭಾಗವಹಿಸಿದರು ಮಾತ್ರವಲ್ಲ, ಹಿಂದೂ ಧರ್ಮವಲ್ಲದೆ, ಇತರ ಧರ್ಮಗಳಲ್ಲಿ ಅಡಗಿರುವ ಶಾಶ್ವತ ಮೌಲ್ಯಗಳನ್ನು ಕೂಡ ಸಮರ್ಥವಾಗಿ ಪ್ರಸ್ತುತಪಡಿಸಿದರು.

ಈ ಸಮ್ಮೇಳನವು ಜರುಗುವ ಮುನ್ನ ಪೌರ್ವಸ್ತ್ಯ ದೇಶಗಳ ಬಗ್ಗೆ ಅಮೆರಿಕೆಯ ಜನತೆಗೆ ಒಳ್ಳೆಯ ಅಭಿಪ್ರಾಯ ಇರಲಿಲ್ಲ. ಅವರು ಕ್ರೈಸ್ತ ಪಾದ್ರಿಗಳ ಅಪಪ್ರಚಾರವನ್ನು ಕೇಳಿ ಚೀನಾ, ಭಾರತ ಮತ್ತು ಜಪಾನ್ ದೇಶಗಳ ಜನತೆಯು ಅನುಸರಿಸುವ ಧರ್ಮ ಮತ್ತು ಸಂಸ್ಕೃತಿಗಳ ಬಗ್ಗೆ ಹೀನಾಯ ಭಾವನೆಯನ್ನು ಹೊಂದಿದ್ದರು.  ಚಿಕಾಗೋ ಈವ್‌ನಿಂಗ್ ಜರ್ನಲ್ ಎಂಬ ಪತ್ರಿಕೆಯು ತನ್ನ ೧೮೯೩ರ ಸೆಪ್ಟೆಂಬರ್ ೧೪ನೇ ದಿನಾಂಕದ ಸಂಚಿಕೆಯ ಸಂಪಾದಕೀಯದಲ್ಲಿ ಹೀಗೆ ಬರೆದಿದೆ: 'ಈ ದೇಶದಲ್ಲಿ (ಅಮೆರಿಕ) ಬಹಳ ಕಡಮೆಯ ಜನ ಪೌರಸ್ತ್ಯ ಧರ್ಮಗಳ ಬಗ್ಗೆ ತಿಳಿದುಕೊಂಡಿದ್ದಾರೆ. ಇಲ್ಲಿನ ಜನರ ಸಾಮಾನ್ಯ ನಂಬಿಕೆ ಏನೆಂದರೆ, ಭಾರತ, ಚೀನಾ ಮತ್ತು ಜಪಾನ್ ದೇಶಗಳಿಗೆ ಸೇರಿದ ಜನರು ಅರ್ಧ-ನಾಗರಿಕರು ಮತ್ತು ವಿಗ್ರಹಾರಾಧಕರು ಎಂದು. ಇದಕ್ಕಾಗಿಯೇ ನಮ್ಮ ಸಮಾಜವು ಅವರಿಗಿಂತ ಉನ್ನತ ಮಟ್ಟದ್ದು ಎಂದು ನಾವು ಭಾವಿಸಿದ್ದೆವು.'

ಆದರೆ ವಿಶ್ವಧರ್ಮ ಸಮ್ಮೇಳನದ ಮಧ್ಯಭಾಗದ ಹೊತ್ತಿಗೆ ಅಮೆರಿಕೆಯ ಸಾಮಾನ್ಯ ಜನರಿಗೂ ಪೂರ್ವದೇಶಗಳ ಧರ್ಮ

ಮತ್ತು ಸಂಸ್ಕೃತಿಯ ಮಹಾನತೆಯ ಅರಿವು ಆಗಿತ್ತು. ಅವರ ಹಲವಾರು ಪೂರ್ವಾಗ್ರಹಗಳು ಮರೆಯಾಗಿದ್ದವು. ಸ್ವಾಮಿ ವಿವೇಕಾನಂದರ ಹಿಂದೂ ಧರ್ಮದ ಬಗೆಗಿನ ಪ್ರಬಂಧ ಮತ್ತು ಇತರೆ ಭಾಷಣಗಳು ಅಮೆರಿಕೆಯ ಜನರ ಕಣ್ಣನ್ನು ತೆರೆಸಿದ್ದವು; ಪೂರ್ವದೇಶಗಳ ಜನರ ಹಲವಾರು ನಂಬಿಕೆಗಳಿಗೆ ಸ್ಪಷ್ಟೀಕರಣ ದೊರಕಿತ್ತು. ಹೀಗೆ ಉಂಟಾದ ಅಮೆರಿಕೆಯ ಜನರ ಮನಃಪರಿವರ್ತನೆಯನ್ನು ಕ್ರಿಶ್ಚಿಯನ್ ಹೆರಾಲ್ಡ್ ಎಂಬ ಪತ್ರಿಕೆಯ ೧೮೯೩ರ ಅಕ್ಟೋಬರ್ ೧೧ರ, ಸಂಚಿಕೆಯ ಒಂದು ಬರಹದಲ್ಲಿ ಸ್ಪಷ್ಟವಾಗಿ ಗುರುತಿಸಬಹುದು:

''ಇತ್ತೀಚೆಗೆ ಸಮಾಪನಗೊಂಡ ಸರ್ವಧರ್ಮ ಸಮ್ಮೇಳನದ ಎರಡು ಮುಖ್ಯ ಫಲಶ್ರುತಿಗಳನ್ನು ನಾವು ಹೀಗೆ ಗುರುತಿಸಬಹುದು. ಮೊದಲು, ಹಲವು ಧರ್ಮಗಳಿಗೆ ಸೇರಿದ, ಅದರಲ್ಲೂ ಪೂರ್ವದೇಶಗಳ ಧಾರ್ಮಿಕ ಮುಖಂಡರು ಮಾಡಿದ ಭಾಷಣಗಳಿಂದ ಅವರೆಲ್ಲರೂ ಒಬ್ಬ ಕ್ರೈಸ್ತ ಪಾದ್ರಿಯ ಧ್ಯೇಯೋದ್ದೇಶಗಳನ್ನೇ ಹೊಂದಿದ್ದಾರೆ ಎನ್ನುವುದು. ಎರಡನೆಯದು ಎಲ್ಲ ಧರ್ಮಗಳು ಕೂಡ ತಮ್ಮದೇ ಪ್ರಕಾರದಲ್ಲಿ ಪಾಪ ಅಥವಾ ಕೆಡುಕನ್ನು ನಿವಾರಿಸುವ ಕಾರ್ಯವನ್ನು ಮಾಡುತ್ತಿವೆ ಎನ್ನುವುದು. ಹಾಗೆಯೇ ಆ ಎಲ್ಲ ಧರ್ಮಗಳು ಮಾನವನಲ್ಲಿ ದಯೆ, ದಾನ ಬುದ್ಧಿ ಮತ್ತು ಸಹಾಯಮಾಡುವ ಪ್ರವೃತ್ತಿಗಳನ್ನೇ ಉತ್ತೇಜಿಸುತ್ತಿವೆ. ಹೀಗೆ ನೀತಿಯ ವಿಷಯದಲ್ಲಿ, ಈ ಎಲ್ಲ ಧರ್ಮಗಳು ಕ್ರೈಸ್ತ ಧರ್ಮಕ್ಕೆ ವಿರೋಧಿಗಳಲ್ಲ, ಅದಕ್ಕೆ ಬದಲಾಗಿ ಸಹಕಾರಿಗಳು.''

ಆದರೆ ಇದಕ್ಕೆ ವಿಭಿನ್ನವಾದ ಅಭಿಪ್ರಾಯಗಳು ಕೂಡ ಸಮ್ಮೇಳನದಲ್ಲಿ ಕಂಡುಬಂದವು. ಪೂರ್ವದೇಶಗಳ, ಅದರಲ್ಲೂ ಹಿಂದೂ ಧರ್ಮವನ್ನು ಹೀಗಳೆಯುವ ಅನೇಕ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ನಿಜವಾದ ಧರ್ಮವೆಂದರೆ ಅದು ಕ್ರೈಸ್ತ ಧರ್ಮ ಮಾತ್ರ ಎಂದು ಬಿಂಬಿಸುವ ಪ್ರಯತ್ನ ಅನವರತವಾಗಿ ನಡೆಯಿತು. ಇದು ವಿಕೋಪಕ್ಕೆ ಹೋಗಿದ್ದು ಸಮ್ಮೇಳನದ ನಾಲ್ಕನೆಯ ದಿನ. ರೆವೆರೆಂಡ್ ಜೋಸೆಫ್ ಕುಕ್ ಎಂಬ ಬೋಸ್ಟನ್ನಿನ ಪಾದ್ರಿಯೊಬ್ಬನು ಅಂದು ಭಾಷಣ ಮಾಡಿದನು. ಅವನು ಕಟ್ಟಾ ಕ್ರೈಸ್ತ ಸಂಪ್ರದಾಯವಾದಿ. ಆತನು ತನ್ನ ಭಾಷಣದಲ್ಲಿ , ಕ್ರೈಸ್ತ ಧರ್ಮಕ್ಕೆ ಸಮನಾದ ಅಥವಾ ಮಿಗಿಲಾದ ಧರ್ಮ ಇನ್ನೊಂದಿಲ್ಲ ಎಂದು ಪ್ರತಿಪಾದಿಸಿದನು; ಹಿಂದೂಧರ್ಮವನ್ನು ಖಡಾಖಂಡಿತವಾಗಿ ಟೀಕಿಸಿದನು. ಇದು ಒಂದು ವಿವಾದಕ್ಕೆ ಎಡೆಮಾಡಿಕೊಟ್ಟಿತು. ಹಲವಾರು ಜನರು ಇವನನ್ನು ವಿರೋಧಿಸಿದರು. ಆದರೆ ಈ ಎಲ್ಲ ವಿಷಪೂರಿತ ಟೀಕೆಗಳಿಗೆ ಸ್ವಾಮೀಜಿಯೂ ಸೇರಿ ಪೂರ್ವದೇಶಗಳ ಪ್ರತಿನಿಧಿಗಳು ಕಿವಿಗೊಡಲಿಲ್ಲ. ಶಾಂತವಾಗಿ ನಗುತ್ತಿದ್ದರು. ಬಹಳ ಸಭ್ಯ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಇವೆಲ್ಲವನ್ನೂ ಪತ್ರಿಕೆಗಳು ವರದಿಮಾಡಿವೆ. ಸ್ವಾಮೀಜಿ ಇಂಥ ಹಲವಾರು ಪ್ರಸಂಗಗಳನ್ನು ಮುಂದೆಯೂ ಎದುರಿಸಬೇಕಾಯಿತು.

ಸ್ವಾಮಿ ವಿವೇಕಾನಂದರು ಕ್ರೈಸ್ತ ಪಾದ್ರಿಗಳ ಈ ಟೀಕಾ ಪ್ರಹಾರಕ್ಕೆ ತಕ್ಕ ಉತ್ತರವನ್ನು ತಮ್ಮ ಪ್ರವಚನಗಳಲ್ಲಿ ನೀಡಿದ್ದನ್ನು ಅಂದಿನ ಪತ್ರಿಕೆಗಳು ಹೀಗೆ ವರದಿ ಮಾಡಿದವು:

ಹಿಂದೂ ಸಂನ್ಯಾಸಿಯಾದ ಸ್ವಾಮಿ ವಿವೇಕಾನಂದರು ಕ್ರೈಸ್ತ ದೇಶಗಳ ಮೇಲೆ ಮರ್ಮಾಘಾತದ ಪ್ರಹಾರವನ್ನು ನೀಡಿದರು : ''ಪೂರ್ವದೇಶಗಳಿಂದ ಬಂದ ನಮಗೆ ದಿನದಿನವೂ ಕ್ರೈಸ್ತಧರ್ಮವನ್ನು ಒಪ್ಪಿಕೊಳ್ಳುವುದೊಂದೇ ಉನ್ನತಿಯ ಮಾರ್ಗ ಎಂದು ಹೇಳಲಾಗುತ್ತಿದೆ. ಇದಕ್ಕೆ ಕೊಡುವ ಕಾರಣ ಕ್ರೈಸ್ತದೇಶಗಳು ಸಂಪದ್ಭರಿತ ದೇಶಗಳಾಗಿವೆ ಎಂಬುದು. ಇಂಗ್ಲೆಂಡ್ ಜಗತ್ತಿನಲ್ಲಿಯೇ ಅತ್ಯಂತ ಸಂಪದ್ಭರಿತ ಕ್ರೈಸ್ತರಾಷ್ಟ್ರ. ಅದು ೨೫೦,೦೦೦,೦೦೦ ಏಷಿಯನ್ನರ ಕತ್ತುಗಳನ್ನು ಹಿಚುಕುತ್ತಿದೆ. ನಾವು ಇತಿಹಾಸದಲ್ಲಿ ನೋಡುವುದು ಏನು? ಕ್ರೈಸ್ತ ಯೂರೋಪಿನ ಸಂಪದ್ಭರಿತ ಯುಗ ಆರಂಭಗೊಂಡಿದ್ದು ಸ್ಪೈನ್ ದೇಶದಿಂದ. ಸ್ಪೈನ್ ದೇಶದ ಸ್ವರ್ಣಯುಗ ಆರಂಭವಾದದ್ದು ಮೆಕ್ಸಿಕೋ ದೇಶದಿಂದ. ಹೀಗೆ ಕ್ರೈಸ್ತದೇಶವು ತನ್ನ ಸಂಪತ್ತನ್ನು ಗಳಿಸಿಕೊಂಡದ್ದು ಇತರ ಜನರ ಕತ್ತುಗಳನ್ನು ಕೊಯ್ಯುವುದರಿಂದ. ಈ ದೊಡ್ಡ ಬೆಲೆಯನ್ನು ತೆತ್ತು ಹಿಂದುವೊಬ್ಬನು ಎಂದಿಗೂ ಸಂಪತ್ತನ್ನು ಗಳಿಸಿಕೊಳ್ಳುವುದಿಲ್ಲ.''

ಸ್ವಾಮಿ ವಿವೇಕಾನಂದರು ೧೮೯೩ರ ಸೆಪ್ಟೆಂಬರ್ ೧೯ರಂದು ಹಿಂದೂಧರ್ಮದ ಮೇಲಿನ ತಮ್ಮ ಪ್ರಬಂಧವನ್ನು ಮಂಡಿಸಿದರು. ಅದಕ್ಕಾಗಿ ಸಂಜೆ ಐದು ಗಂಟೆಗೆ ಸ್ವಾಮೀಜಿ ಮಾತನಾಡಲು ಎದ್ದರು. ಅಲ್ಲಿದ್ದ ಅಗಾಧ ಸಂಖ್ಯೆಯ ಸಭಿಕರು ಅಪಾರ ಕರಡತಾನ ಮಾಡಿದರು. ಮರುದಿನದ ಚಿಕಾಗೋ ಟೈಮ್ಸ್ ಪತ್ರಿಕೆ ಹೀಗೆ ಇದನ್ನು ವರದಿ ಮಾಡಿತು. ಅದರ ಒಂದು ಭಾಗ ಹೀಗಿತ್ತು: ''ಸಂಜೆಯ ಹೊತ್ತು, ಹಿಂದೂ ಸಂನ್ಯಾಸಿಯಾದ ಸ್ವಾಮಿ ವಿವೇಕಾನಂದರು ಭಾಷಣಕಾರರಾಗಿದ್ದರು. ಅವರದು ತೀವ್ರಗತಿಯ ಭಾಷಣಚತುರತೆ, ಬಹಳ ಸಭ್ಯರೀತಿಯ ನಡವಳಿಕೆ. ಇವೆಲ್ಲ ಸಭಿಕರ ಸಹಾನುಭೂತಿಯನ್ನು ಪಡೆದುಕೊಂಡವು.'' ಹಾಗೆಯೇ ಮೇಲಿನ ಪತ್ರಿಕೆಯು ಸ್ವಾಮೀಜಿಯವರು ಧಾರ್ಮಿಕ ಅಸಹಿಷ್ಣುತೆಯ ವಿರುದ್ಧ ಗುಡುಗು ಹಾಕಿದ್ದನ್ನು ಕೂಡ ವಿಶೇಷವಾಗಿ ಗಮನಿಸಿತು : '' ಹಿಂದೂ ಸಂನ್ಯಾಸಿಯಾದ ಸ್ವಾಮಿ ವಿವೇಕಾನಂದರನ್ನು ಡಾ. ನೋಬಲ್ ಪರಿಚಯ ಮಾಡಿ ಕೊಟ್ಟರು. ವಿವೇಕಾನಂದರು ವೇದಿಕೆಯ ಮಧ್ಯಭಾಗಕ್ಕೆ ಬರಲು ಮುಂದೆ ಬಂದಾಗ, ಭಾರೀ ಕರತಾಡನವು ಕೇಳಿಬಂತು. ಅವರು ಕಿತ್ತಳೆ ಬಣ್ಣದ ನಿಲುವಂಗಿಯನ್ನು ತೊಟ್ಟಿದ್ದರು. ಹಳದಿ ಬಣ್ಣದ ರುಮಾಲನ್ನು ಧರಿಸಿದ್ದರು. ಅವರ ಸುಂದರ ಮುಖದಲ್ಲಿ ತಿಳಿನಗು ಮನೆಮಾಡಿತ್ತು. ಅವರ ಕಣ್ಣುಗಳು ನಾಟಕೀಯವಾಗಿ ಹೊಳೆಯುತ್ತಿದ್ದವು. ಅವರು ಹೇಳಿದರು : ''ನಾನು ಇಡೀ ದಿನ ಕುಳಿತುಕೊಂಡಿದ್ದೆ; ಅಸಹಿಷ್ಣುತೆಯ ಪರಮಾವಧಿಯ ಮಾತುಗಳನ್ನು ಕೇಳುತ್ತಲಿದ್ದೆ. ಮುಸ್ಲಿಮ್ ಧರ್ಮದ ಪ್ರಶಂಸೆಯನ್ನೂ

ಕೇಳಿದೆ. ಆದರೆ ಇವತ್ತಿಗೂ ಮುಸ್ಲಿಮ್ ಖಡ್ಗವು ಭಾರತದಲ್ಲಿ ವಿನಾಶವನ್ನು ಕೈಗೊಳ್ಳುತ್ತಿದೆ. ರಕ್ತ ಮತ್ತು ಖಡ್ಗಗಳು ಹಿಂದೂಗಳಿಗಲ್ಲ , ಏಕೆಂದರೆ ಅವರ ಧರ್ಮವು ಪ್ರೇಮದ ನಿಯಮದ ಮೇಲೆ ಆಧಾರಿತವಾಗಿದೆ.''

ಸ್ವಾಮೀಜಿ ತಮ್ಮ ಭಾಷಣವನ್ನು ಮೇಲಿನ ಮಾತುಗಳಿಂದ ಆರಂಭಮಾಡಿದರು. ಇದಕ್ಕೆ ಜನರು ಬಹಳವಾಗಿ ಕರತಾಡನ ಮಾಡಿದರು. ತದನಂತರ, ಸ್ವಾಮೀಜಿ ಹಿಂದೂಧರ್ಮದ ಮೇಲಿನ ತಮ್ಮ ಪ್ರಬಂಧವನ್ನು ಓದಲು ಆರಂಭಿಸಿದರು. ಈ ಪ್ರಬಂಧವು ಅತ್ಯಂತ ಪ್ರಸಿದ್ಧವಾದುದು. ಇದಕ್ಕೆ ಅಧಿಕೃತವಾಗಿ 'ಒಂದು ಧರ್ಮವಾಗಿ ಹಿಂದೂ ಧರ್ಮ' (Hinduism as a Religion) ಎಂಬ ಹೆಸರನ್ನು ಇಡಲಾಗಿತ್ತು. ಇದನ್ನು 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ'ಯ ಮೊದಲನೆಯ ಸಂಪುಟದಲ್ಲಿ ಕಾಣಬಹುದು. ಸೋದರಿ ನಿವೇದಿತಾ 'ವಿವೇಕಾನಂದರ ಕೃತಿ ಶ್ರೇಣಿ'ಯ ತಮ್ಮ ಮುನ್ನುಡಿಯಲ್ಲಿ ಹೀಗೆ ಬರೆಯುತ್ತಾರೆ: ''ಸ್ವಾಮೀಜಿಯವರು ಚಿಕಾಗೋದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಉಪನ್ಯಾಸದ ಬಗ್ಗೆ ಹೀಗೆ ಹೇಳಬಹುದು: ಹಿಂದೂಗಳ ಧಾರ್ಮಿಕ ಭಾವನೆಗಳನ್ನು ಕುರಿತು ಮಾತನಾಡಲು ಅವರು ಪ್ರಾರಂಭಿಸಿದರು; ಆದರೆ ಅವರು ಸಮಾಪ್ತಿಗೊಳಿಸಿದಾಗ ಹಿಂದೂಧರ್ಮವೇ ಸೃಷ್ಟಿಯಾಗಿತ್ತು.''

ಸ್ವಾಮಿ ವಿವೇಕಾನಂದರ ಈ ಪರಿಣಾಮಕಾರಿ ಭಾಷಣವು ಬೆರಗುಗೊಳಿಸುವಷ್ಟು ಹೆಚ್ಚಿನ ಪಂಗಡಗಳು ಮತ್ತು ನಂಬಿಕೆಗಳನ್ನು ಒಳಗೊಂಡಿರುವ ಹಿಂದೂಧರ್ಮಕ್ಕೆ ಒಂದು ವಿಶಿಷ್ಟ ರೀತಿಯ ಸಾಮರಸ್ಯ ಮತ್ತು ಐಕ್ಯತೆಯನ್ನು ತಂದುಕೊಟ್ಟಿತು. ಈ ಎಲ್ಲ ಪಂಥಗಳು ಅನಾದಿ ಕಾಲದಿಂದಲೂ ಹಿಂದೂಧರ್ಮ ಎಂಬ ಹೆಸರಿನಲ್ಲಿ ಒಟ್ಟುಗೂಡಿವೆ ಮತ್ತು ವಿಕಸನಗೊಂಡಿವೆ. ಇದರಂತೆಯೇ ಸ್ವಾಮಿ ವಿವೇಕಾನಂದರು ಹಿಂದೂಧರ್ಮದ ಅತ್ಯುನ್ನತ ತತ್ತ್ವ ಮತ್ತು ಆಕಾಂಕ್ಷೆಗಳನ್ನು, ಉಚ್ಚ ಧಾರ್ಮಿಕ ಗುರಿ ಮತ್ತು ಉದ್ದೇಶಗಳನ್ನು ಮತ್ತು ಸಾರಭೂತವಾದ ನಂಬಿಕೆಗಳನ್ನು ಸಮರ್ಥವಾಗಿ ಸಭಿಕರ ಮುಂದೆ ಪ್ರಸ್ತುತಗೊಳಿಸಿದರು. ಅವುಗಳೆಲ್ಲವೂ ಹಿಂದೂಧರ್ಮದ ಪ್ರತಿಯೊಂದು ಪಂಗಡಕ್ಕೆ ಸೇರಿದವುಗಳೇ ಆಗಿದ್ದವು. ಇವೆಲ್ಲವನ್ನೂ ಸ್ವಾಮೀಜಿ ಅತ್ಯಂತ ಸಮರ್ಥವಾಗಿ, ಸ್ಫೂರ್ತಿಯುತವಾಗಿ ವಿವರಿಸಿದರು; ಹಿಂದೂಧರ್ಮವನ್ನು ಮಾನವತೆಯ ಆತ್ಮದಿಂದಲೇ ಚಿರಂತನವಾಗಿ ಹೊಮ್ಮುತ್ತಿರುವ ಜೀವಂತ ಧರ್ಮವೆಂಬಂತೆ ಸರ್ವಧರ್ಮ ಸಮ್ಮೇಳನದ ಸಭಿಕರ ಮುಂದೆ ಪ್ರಸ್ತುತಪಡಿಸಿದರು.

ಸ್ವಾಮೀಜಿ ಈ ಪ್ರಬಂಧದಲ್ಲಿ ಪ್ರಸ್ತುತ ಪಡಿಸಿದ ಕೆಲವು ವಿಚಾರಗಳು ಹೀಗಿವೆ: ''ಮುಕ್ತಾತ್ಮರಾಗಲು, ಪವಿತ್ರಾತ್ಮರಾಗಲು, ದೇವರನ್ನು ಸೇರಲು ಮತ್ತು ದೇವರನ್ನು ನೋಡಲು ಅನವರತ ಹೋರಾಡುವುದೇ ಹಿಂದೂಗಳ ಸಿದ್ಧಾಂತದ ಗುರಿ. ಹೀಗೆ ದೇವ ರನ್ನು ಸೇರುವುದೇ, ದೇವರನ್ನು ನೋಡುವುದೇ, ಪರಂಧಾಮ ದಲ್ಲಿರುವ ಭಗವಂತನಂತೆ ಪವಿತ್ರಾತ್ಮರಾಗುವುದೇ ಹಿಂದೂ ಧರ್ಮ... ಹಿಂದೂವಿನ ಧರ್ಮವೆಲ್ಲ ಸಾಕ್ಷಾತ್ಕಾರದಲ್ಲಿ ನೆಲೆಸಿದೆ. ದಿವ್ಯವಾದುದನ್ನು ಸಾಕ್ಷಾತ್ಕರಿಸಿಕೊಂಡು ಮಾನವ ದಿವ್ಯತೆಗೆ ಏರ ಬೇಕಾಗಿದೆ... ಹಿಂದು ಮತ್ತಾರ ವಿಗ್ರಹಪೂಜೆಯನ್ನೂ ದೂರು ವುದಿಲ್ಲ. ಅದನ್ನು ಪಾಪವೆನ್ನುವುದಿಲ್ಲ. ಇವುಗಳಲ್ಲಿ ಅವನು ಜೀವ ನಕ್ಕೆ ಆವಶ್ಯಕವಾದ ಒಂದು ಘಟ್ಟವನ್ನು ಕಾಣುತ್ತಾನೆ... ಹಿಂದೂಗಳಲ್ಲಿ ಲೋಪದೋಷಗಳಿವೆ, ನಿಜ. ಒಮ್ಮೊಮ್ಮೆ ಅವರು ಕೆಲವು ನಿಯಮಗಳನ್ನು ಮೀರುವುದುಂಟು. ಆದರೆ ಗಮನಿಸಿ, ಅದಕ್ಕೆ ಪ್ರಾಯಶ್ಚಿತ್ತರೂಪವಾಗಿ ಅವರು ತಮ್ಮ ದೇಹವನ್ನು ದಂಡಿಸುವರೆ ವಿನಾ ತಮ್ಮ ನೆರೆಯವರ ಕುತ್ತಿಗೆಯನ್ನು ಕೊಯ್ಯಲು ಹೋಗುವುದಿಲ್ಲ... ಹಿಂದೂಗಳಿಗೆ ಮತಧರ್ಮಗಳ ಜಗತ್ತು ಕೇವಲ ಒಂದು ಯಾತ್ರೆಯಂತೆ. ವಿಧವಿಧವಾದ ಸ್ತ್ರೀಪುರುಷರು ಬೇರೆ ಬೇರೆ ಸ್ಥಿತಿಗತಿಗಳ ಮೂಲಕ ಒಂದೇ ಗುರಿಯನ್ನು ಸೇರುತ್ತಿರುವರು... ಎಲ್ಲ ಧರ್ಮಗಳ ಸ್ಫೂರ್ತಿಶಕ್ತಿಯೂ ಒಬ್ಬನೇ ದೇವರು.''

ಇದಲ್ಲದೆ ತಮ್ಮ ಗುರು ಶ್ರೀರಾಮಕೃಷ್ಣರ ಆವಿರ್ಭಾವದ ಬಗ್ಗೆ ಕೂಡ ಸ್ವಾಮೀಜಿ ಅಪರೋಕ್ಷವಾಗಿ ಉಲ್ಲೇಖಿಸಿದರು: ''ಪೂರ್ವ ದಿಗಂತದಲ್ಲಿ ತಾರೆ ಉದಯಿಸಿತು; ಅದು ಕೆಲವೊಮ್ಮೆ ಮಂದವಾಗುತ್ತಾ ಮತ್ತೊಮ್ಮೆ ಪ್ರಕಾಶಮಾನವಾಗುತ್ತಾ ದೃಢವಾಗಿ ಪಶ್ಚಿಮದ ಕಡೆ ಸಾಗಿತು.''

ಹಿಂದೂಧರ್ಮದ ಬಗೆಗಿನ ಈ ಪ್ರಬಂಧವು ಅಭೂತಪೂರ್ವವಾದ ಪ್ರಭಾವವನ್ನು ಬೀರಿತು. ಒಂದು ವೃತ್ತಪತ್ರಿಕೆಯ ಲೇಖನವು ಈ ಪ್ರಬಂಧದ ಬಗ್ಗೆ ವಿಶೇಷವಾದ ಉಲ್ಲೇಖವನ್ನು ಮಾಡಿದೆ: ''ಸಮ್ಮೇಳನ ಪ್ರತಿನಿಧಿಗಳಲ್ಲಿ ಪ್ರಮುಖರಾದವರೆಂದರೆ ಸ್ವಾಮಿ ವಿವೇಕಾನಂದರು. ಇವರು ಹಿಂದೂ ತತ್ತ್ವಜ್ಞಾನಿಗಳು. ಇವರದು ಮೋಹಕವಾದ ನೋಟ. ಯುವಕರಾಗಿದ್ದರೂ ಪ್ರಾಚೀನ ಭಾರತದ ಜ್ಞಾನವನ್ನು ತಮ್ಮಲ್ಲಿ ತುಂಬಿಕೊಂಡವರು. ಅವರು ತಮ್ಮ ಭಾಷಣದ ಮೂಲಕ ಇಡೀ ಸಮ್ಮೇಳನವನ್ನು ಸಮ್ಮೋಹಗೊಳಿಸಿದರು. ಸಮ್ಮೇಳನದಲ್ಲಿ ಕ್ರೈಸ್ತಧರ್ಮದ ಎಲ್ಲ ಪಂಗಡಗಳಿಗೂ ಸೇರಿದ ಧರ್ಮಾಧಿಕಾರಿಗಳು ಮತ್ತು ಪಾದ್ರಿಗಳು ಉಪಸ್ಥಿತರಿದ್ದರು. ಅವರೆಲ್ಲರೂ ಸ್ವಾಮಿ ವಿವೇಕಾನಂದರ ಭಾಷಣವನ್ನು ಕೇಳಿ ಸ್ತಂಭೀಭೂತರಾದರು. ವಿವೇಕಾನಂದರ ಚಿನ್ನದ ಬಣ್ಣದ ಮುಖದಿಂದ ಜ್ಯೋತಿಯೊಂದು ಹೊಮ್ಮುತ್ತಿತ್ತು; ಅವರ ಪ್ರಖರ ವಾಣಿಯು ಅವರ ಬುದ್ಧಿಮತ್ತೆಯ ದ್ಯೋತಕವಾಗಿತ್ತು. ಅವರ ಅತ್ಯದ್ಭುತವಾದ ಇಂಗ್ಲಿಷ್ ಭಾಷೆಯು ಪ್ರಾಚೀನ ಕಾಲದ ಈ ಧರ್ಮದ ಸೊಗಸನ್ನು ಹೊರ